# ಬಣ್ಣದಲ್ಲೇನಿದೆ

■ ಸಂತೆಬೆನ್ನೂರು ಫೈಜ್ನಟ್ರಾಜ್
ಕಲೆ: ಸಂತೋಷ್ ಸಸಿಹಿತ್ಲು



ಕಾಗೆ ನೋಡಿ ಕಪ್ಪು ಕೋಗಿಲೆಯೂ ಕಪ್ಪು
ಬಣ್ಣ ಹಂಗಿದ್ರೆ ನೋಡಿ ಯಾರದೇನು ತಪ್ಪು

ಒಂದು ಅಗುಳಿಗೂ ಬಳಗನ ಕರೆದು ಕಾ ಕಾ ಕಾ
ಹಸಿರ ನಡುವೆ ಕಾಗೆ ಗೂಡಲ್ ಕೂ ಕೂ ಕೂ
ಕಾಡಿಗೆ ಕಪ್ಪು
ಕೃಷ್ಣ ಕಪ್ಪು

ಇನ್ನೇನ್ ಬೇಕು ಕೇಳಿ
ಗುಣದ ಮುಂದೆ ಬಣ್ಣ ಯಾವ ಲೆಕ್ಕ ಹೇಳಿ

ಒಂದು ಒಂದೊಂದಕೆ ಉಂಟು
ಅದರದೇ ತೂಕ
ಬಣ್ಣ ನೋಡಿ ಮೇಲೆ ಕೆಳಗೆ
ತೂಗದಾದ್ರೂ ನಮಗೆ ಬೇಕ

ಮೆತ್ತಿದ ಬಣ್ಣ
ತಿಕ್ಕಿದ ಸುಣ್ಣ
ನೀರ್ ಬಿದ್ರೆ ಗೋತ;
ಏನೇ ಆದ್ರೂ
ಗುಣ ಒಂದೇ ನಮ್ಮನ್ನು
ಕಾಯೋ ತಾಯತ! ■

---

## ಕುಂಚ ಪ್ರಪಂಚ

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in



**ಮಲ್ಲಿಕಾರ್ಜುನ ಕುಂಬಾರ್**
4ನೇ ತರಗತಿ, ಆಂಗ್ಲಿಸ್ಟ್ ಇಂಗ್ಲಿಷ್ ಮೀಡಿಯಂ ಸ್ಕೂಲ್, ರಾಯಚೂರು







**ಸುಧನ್ವ ಎ.ಕೆ. ಭಾಗವತ್**
5ನೇ ತರಗತಿ, ಮುಕುಂದಕೃಪ ಇಂಗ್ಲಿಷ್ ಸ್ಕೂಲ್, ಉಡುಪಿ